4. ವಿಷಯ : ಪೊಲೀಸರ ಸಮ್ಮುಖದಲ್ಲಿಯೇ ಶವವನ್ನು ಹೂತಿರುವ ಬಗ್ಗೆ.

ಶ್ರೀ ಎ. ಮಂಜು (ಅರಕಲಗೂಡು) : ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರದಲ್ಲಿ ಚೌರಗಲ್ಲು ಎಂಬ ಗ್ರಾಮದಲ್ಲಿ ಬರ್ಬರವಾಗಿ ಹತ್ಯೆಯಾಗಿ ಆ ಗ್ರಾಮದಲ್ಲಿ ಪೊಲೀಸರ ಸಮ್ಮುಖದಲ್ಲಿಯೇ ಗ್ರಾಮದ ಮಧ್ಯದ ಮನೆಯಲ್ಲಿಯೇ ಶವವನ್ನು ಹೂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅದರ ಬಗ್ಗೆ ಕ್ರಮ ಏನು ತೆಗೆದುಕೊಂಡಿದ್ದೀರಿ? ಅದರ ಬಗ್ಗೆ ತಾಲ್ಲೂಕು ಆಡಳಿತದ ಎದುರಿನಲ್ಲಿಯೇ ಗ್ರಾಮದಲ್ಲಿ ಶವವನ್ನು ಹೂಳುವಂತಹ ವ್ಯವಸ್ಥೆಯಾಗಿದ್ದರೆ ಈ ಬಗ್ಗೆ ಸರ್ಕಾರವು ಏನು ಕ್ರಮವನ್ನು ತೆಗೆದುಕೊಂಡಿದೆ ಎಂಬುದರ ಬಗ್ಗೆ ತಾವು ತಿಳಿಸಬೇಕು.

ಶ್ರೀ ಆರ್. ಅಶೋಕ್ (ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಅರಕಲಗೂಡು ಗ್ರಾಮದಲ್ಲಿ ಆಗಿರುವಂತಹ ಈ ಒಂದು ಕಾನೂನು ಬಾಹಿರವಾಗಿ ಶವವನ್ನು ಹೂಳಿರುವಂತಹದ್ದರ ಬಗ್ಗೆ ನಾನು ವರದಿಯನ್ನು ತೆಗೆದುಕೊಂಡು ನಿಮಗೆ ನಾಳೆ ಉತ್ತರವನ್ನು ಕೊಡುತ್ತೇನೆ.

ಶ್ರೀ ಎ. ಮಂಜು : ನೀವು ವರದಿಯನ್ನು ತೆಗೆದುಕೊಂಡು ಉತ್ತರ ಕೊಡುತ್ತೇನೆ ಎನ್ನುವುದಕ್ಕಿಂತ

ಅಧ್ಯಕ್ಷರು : ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಿರಿ. ಅವರು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ಶ್ರೀ ಸುರೇಶ್‌ಗೌಡರವರೆ, ತಾವು ಮಾತನಾಡಿ.

ಶ್ರೀ ಎ. ಮಂಜು : ತಹಶೀಲ್ದಾರ್ ಹಾಗೂ ಸಬ್ ಇನ್ಸ್‌ಪೆಕ್ಟರ್‌ರವರ ಮುಂದೆಯೇ ಈ ಕೃತ್ಯ ಆಗಿರುವುದರಿಂದ ಅವರನ್ನು ಈ ಕೂಡಲೇ ವಜಾ ಮಾಡಬೇಕು. ಇದು ಅವರ ಮುಂದೆಯೇ ಆಗುವುದಾದರೆ ಈ ರಾಜ್ಯದಲ್ಲಿ ಈ ರೀತಿಯಾದರೆ ಏನಾಗುತ್ತದೆ? ದಯವಿಟ್ಟು ಕೂಡಲೇ ತಹಶೀಲ್ದರ್‌ರವರನ್ನು ಸಸ್ಪೆಂಡ್ ಮಾಡಬೇಕು. ಇದು ಸಬ್‌ಇನ್ಸ್‌ಪೆಕ್ಟರ್‌ರವರ ಮುಂದೆಯೇ ಆಗಿದೆ. ಊರಿನಲ್ಲಿ ಭಾರಿ ಅತಂಕವಾಗಿದೆ. ಇದು ಗ್ರಾಮದ ಮನೆಯೊಳಗಡೆಯೇ ಆಗಿದೆ. ದಯವಿಟ್ಟು ಅವರನ್ನು ಕೂಡಲೇ ಸಸ್ಪೆಂಡ್ ಮಾಡಬೇಕು.

ಅಧ್ಯಕ್ಷರು : ನೀವು ಎಲ್ಲವನ್ನೂ ಕೇಳುತ್ತಿದ್ದರೆ ಎಲ್ಲಾ ಶೂನ್ಯವೇಳೆಯು ತಿರಸ್ಕಾರವಾಗುತ್ತದೆ.

ಶ್ರೀ ಆರ್. ಅಶೋಕ್ : ಈ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಸುರೇಶ್‌ಗೌಡರವರೆ, ತಾವು ಕೇಳಿ.

5. ವಿಷಯ: ತುಮಕೂರು ನಾಲಾ ವಲಯಕ್ಕೆ ನೀರು ಹರಿಸುವ ಬಗ್ಗೆ.

ಶ್ರೀ ಬಿ. ಸುರೇಶ್ ಗೌಡ : ಮಾನ್ಯ ಸಭಾಧ್ಯಕ್ಷರೆ, ನಮ್ಮ ಹೇಮಾವತಿ ಡ್ಯಾಂನಿಂದ ನಮ್ಮ ತುಮಕೂರು ನಾಲೆಗೆ ನೀರನ್ನು ಬಿಡುತ್ತಿದ್ದಾರೆ. ಅಲ್ಲಿ ಒಂದು ನಾಲೆಯು ಒಡೆದು ತುಮಕೂರು ಬ್ರಾಂಚ್ ಕೆನಾಲ್ ಹತ್ತಿರ ಸಮಾರು 15 ದಿವಸಗಳ ಕಾಲ ನೀರು ಬಂದಿರುವುದಿಲ್ಲ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನನ್ನದೂ calling attention ಇದೆ.

ಶ್ರೀ ಬಿ. ಸುರೇಶ್ ಗೌಡ : ನಾನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ.

ಅಧ್ಯಕ್ಷರು : ಆಯಿತು, ಈ ಬಗ್ಗೆ ನೀವೂ ಸಹ ಕೇಳಿಬಿಡಿ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೆ, ಇದು calling attention ನಲ್ಲಿದೆ.ಈ ಬಗ್ಗೆ ವಿವರವಾದ ಉತ್ತರವನ್ನು ಈದಿನವೇ ಕೊಡುತ್ತೇನೆ.

ಶ್ರೀ ಬಿ. ಸುರೇಶ್‌ಗೌಡ : ನಾನು ಈ ಬಗ್ಗೆ ಹೇಳಿ ಮುಗಿಸಿಬಿಡುತ್ತೇನೆ. ಈಗ ನಮ್ಮ ನಾಲೆಗೆ ನೀರು 15 ದಿವಸಗಳ ಕಾಲ ಬರಬೇಕಾಗಿತ್ತು. ಒಂದು ಕಡೆಯಲ್ಲಿ ನಮ್ಮ ತುಮಕೂರು ಜಿಲ್ಲೆಯನ್ನು ಸಂಪೂರ್ಣವಾಗಿ ಬರಪೀಡಿತ ಜಿಲ್ಲೆ ಎಂದು ಈಗಾಗಲೇ ಘೋಷಣೆಯನ್ನು ಮಾಡಿದ್ದಾರೆ. ಆದರೆ ಸಮಾರು ಕೆರೆಗಳು ತುಂಬಿಲ್ಲದೇ ಇರುವುದರಿಂದ ಕುಡಿಯುವ ನೀರಿಗಾಗಿ ಹಾಹಾಕಾರವಾಗಿದೆ. ಜನಜಾನುವಾರುಗಳಿಗೂ ಸಹ ನೀರಿಲ್ಲ. ಕುಡಿಯುವ ನೀರಿನ ಪ್ರಾಜೆಕ್ಟ್‌ಗಳು ಏನಿದೇ ಅದಕ್ಕೂ ಸಹ ನಮ್ಮ ತಾಲ್ಲೂಕಿನಲ್ಲಿ ನೀರು ತುಂಬಿಲ್ಲ. ಈಗ ಅಧಿಕಾರಿಗಳು ಹೇಳುವ ಪ್ರಕಾರ ಈ ತಿಂಗಳು 13ನೇ ತಾರೀಖು ನೀರನ್ನು ನಿಲ್ಲಿಸುತ್ತೇವೆಂದು ಹೇಳಿ, ಗೊರೂರಿನ ಡ್ಯಾಂನ ಅಧಿಕಾರಿಗಳು ಹೇಳಿದ್ದಾರೆನ್ನುವಂತಹ ಮಾಹಿತಿ ಇದೆ. ಈ ಸಂದರ್ಭದಲ್ಲಿ